# ನಾದದಲೆಯ ಪ್ರಜಾಪ್ರಭುತ್ವ @100

## ವಸುಂಧರಾ ದಾಸ್, ರಾಬರ್ಟೋ ನಾರಾಯಣ್‌ರ ‘ಡ್ರಮ್ ಜಾಮ್’ ವಿಶಿಷ್ಟ ನಡೆ



**ಅಣಿಯಾಗಿ ಇಟ್ಟ ಡ್ರಮ್‌ ಸಂಗೀತ ಬಾರದವರೂ ಬೆರಳಾಡಿಸಿ ಸಂಗೀತ ಹೊಮ್ಮಿಸಬಹುದು. ತಿಂಗಳಿಗೊಂದು ಭಾನುವಾರ ಹೀಗೆ ಉಚಿತವಾಗಿ ಯಾರು ಬೇಕಾದರೂ ಸಂಗೀತಗಾರರಾಗುವ ಅವಕಾಶ ಮೂಡಿಸಿದ್ದು ‘ಡ್ರಮ್ ಜಾಮ್’. ಹತ್ತು ವರ್ಷಗಳಲ್ಲಿ ನೂರು ಕಂತುಗಳನ್ನು ಅದೀಗ ಪೂರೈಸಿದೆ. ಅದರ ನೆನಪಿನಂಗಳ ಆಸಕ್ತಿಕರ.**

**■ ವಿಶಾಖ ಎನ್‌.**

ಪ್ರತಿ ತಿಂಗಳು ಮೂರನೇ ಭಾನುವಾರ ಬೆಂಗಳೂರಿನ ಎಂ.ಜಿ. ರಸ್ತೆಯ ಮೆಟ್ರೊ ಬುಲೆವಾರ್ಡ್‌ನಲ್ಲಿ ನಾದದಲೆ. ಅಲ್ಲಿ ಯಾರು ಬೇಕಾದರೂ ಹೋಗಿ, ಇಟ್ಟಿರುವ ಡ್ರಮ್‌ಗಳನ್ನು ಸಲೀಸಾಗಿ ನುಡಿಸಬಹುದು. ತಾಳ ತಪ್ಪಿದರೂ ಚಿಂತೆ ಇಲ್ಲ. ಸಂಗೀತದ ಗಂಧ ಇಲ್ಲದಿದ್ದರೂ ಆದೀತು. ಡ್ರಮ್ ಮೇಲೆ ಆಡಿಸಿದ ಬೆರಳು ಮೂಡಿಸುವ ಸಂಗೀತ ಕರ್ಣಾನಂದ ನೀಡುವುದಷ್ಟೆ ಮುಖ್ಯ. ರಾಬರ್ಟೊ ನಾರಾಯಣ್, ವಸುಂಧರಾ ದಾಸ್ ಇಬ್ಬರೂ ಭಾಗಿಯಾಗಿರುವ ‘ಡ್ರಮ್ ಜಾಮ್’ ಎನ್ನುವ ಸಂಸ್ಥೆ ಇಂತಹ ‘ನಾದದಲೆಯ ಪ್ರಜಾಪ್ರಭುತ್ವ’ಕ್ಕೆ ನಾಂದಿಹಾಡಿದ್ದು 2013ರಲ್ಲಿ. ಬುಲೆವಾರ್ಡ್ ರಂಗೋಲಿಯ ಸಹಾಯಕ ಕ್ಯುರೇಟರ್ ಬಾಲಾಜಿ ಮರಗೊಂಡ ಅವರೂ ಅದಕ್ಕೆ ಸಾಥ್ ನೀಡುತ್ತಾ ಬಂದರು. ಇದೇ ಆಗಸ್ಟ್ ತಿಂಗಳಲ್ಲಿ ನಡೆದದ್ದು ಈ ‘ಡ್ರಮ್ ಜಾಮ್’ನ ನೂರನೇ ಕಂತು.

ಕೋವಿಡ್ ಸಂದರ್ಭದಲ್ಲಿ ಎರಡೂವರೆ ವರ್ಷ ಬ್ರೇಕ್ ಬೀಳದೇ ಹೋಗಿದ್ದರೆ ಎಂದೋ ಈ ಸಂಭ್ರಮ ನೆರವೇರಬೇಕಿತ್ತು. ‘ಯಾರು ಬೇಕಾದರೂ ಬಂದು ನುಡಿಸಿ’ ಎಂದು ಹತ್ತು ವರ್ಷಗಳ ಹಿಂದೆ ಕರೆಯಿತ್ತ ವಸುಂಧರಾ ದಾಸ್ ಸಿನಿಮಾ ನಟಿಯಾಗಿಯೂ ಜನಪ್ರಿಯರಾಗಿದ್ದವರು. ಈಗ ಅವರು ‘ಡ್ರಮ್ ಜಾಮ್’ ತಂಡದೊಟ್ಟಿಗೆ ಅನೇಕ ಸಮಾಜಮುಖಿ ಕೆಲಸಗಳಲ್ಲಿ ತೊಡಗಿದ್ದಾರೆ. ಎಲ್ಲ ಉದ್ದೇಶಗಳಿಗೆ ಅವರು ಅಪ್ಪಿಕೊಂಡಿರುವ ಏಕಮಾತ್ರ ಮಾಧ್ಯಮ ಸಂಗೀತ ಎನ್ನುವುದು ವಿಶೇಷ. ಅವರು ‘ಡ್ರಮ್ ಜಾಮ್’ ಪರಿಕಲ್ಪನೆಯನ್ನು ‘ಸುಧಾ’ ಜತೆಗೆ ಹಂಚಿಕೊಂಡರು.

‘ಸಂಗೀತ ಕೆಲವರದ್ದು; ಅದರಲ್ಲೂ ಶಾಸ್ತ್ರೀಯವಾಗಿ ಸಂಗೀತ ಕಲಿತವರದ್ದು ಎಂಬ ಭಾವನೆ ಇರುವವರೇ ಹೆಚ್ಚು. ಅದು ಸುಳ್ಳು. ಯಾರು ಬೇಕಾದರೂ ಸಂಗೀತ ಹೊಮ್ಮಿಸಬಹುದು. ಅದಕ್ಕೆ ಕಲಿಕೆ ಇರಲೇಬೇಕು ಎಂದೇನೂ ಇಲ್ಲ. ಒಬ್ಬ ವ್ಯಕ್ತಿಯ ಭಾಷೆ, ಆರ್ಥಿಕ ಸ್ಥಿತಿ, ಜಾತಿ–ಧರ್ಮ, ಲಿಂಗ ಎಲ್ಲವನ್ನೂ ಮೀರಲು ಸಾಧ್ಯವಿರುವುದು ಕಲೆಯಿಂದ. ಸಂಗೀತ ಕೂಡ ಮುಖ್ಯವಾದ ಕಲೆ. ಅದನ್ನು ಯಾರು ಬೇಕಾದರೂ ಸುಖಿಸಲಿ ಎಂದೇ



ಎಲ್ಲರಿಗೂ ಸಂಗೀತದ ಗಂಧ ಸೋಕಬೇಕು. ಬರೀ ಕೇಳುವ ದೃಷ್ಟಿಯಿಂದ ಇದು ಆಗುವುದಲ್ಲ, ತಾವೇ ನುಡಿಸುವ ದೃಷ್ಟಿಯಿಂದ ಆಗಬೇಕು. ಸಂಗೀತ ದೈವಿಕ ಎಂದೆಲ್ಲ ಹೇಳುವುದು ನಿಜ. ಆದರಿಂದ ಮನಸ್ಸಿಗೆ ಸಂಬಂಧಿಸಿದ ಎಷ್ಟೋ ಸಮಸ್ಯೆಗಳು ಬಗೆಹರಿಯುತ್ತವೆ. ಸಂಗೀತಕ್ಕೆ ಚಿಕಿತ್ಸಕ ಗುಣವಿರುವುದರಿಂದಲೇ ಅದು ಹೆಚ್ಚು ಡೆಮಾಕ್ರಟಿಕ್ ಆಗಬೇಕು. ‘ಡ್ರಮ್ ಜಾಮ್’ ಅಂತಹ ಮಹತ್ವಾಕಾಂಕ್ಷೆ ಹೊಂದಿದೆ.

**–ವಸುಂಧರಾ ದಾಸ್,** ಸಂಗೀತಗಾರ್ತಿ–ನಟಿ